**ದಿನಾಂಕಃ 04.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ. ಎಂ.ವಿ.ಡಿ. ವಕೀಲರಿಂದಃ**

ನಾನು 6 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ನಮೂದಿಸಿದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಚನ್ನಬಸಮ್ಮ ಮತ್ತು ಚನ್ನಬಸಪ್ಪ ಯಾವಾಗ ಹಿಸ್ಸೆ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಅವರು ಎಷ್ಟು ಹಿಸ್ಸೆ ಮಾಡಿಕೊಂಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 17 ಚಿಲ್ಲರೆ ಜಮೀನನ್ನು ಎರಡು ಭಾಗ ಮಾಡಿಕೊಂಡಿರುತ್ತಾರೆ. ಎಷ್ಟು ಎಕರೆ ಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು ಆತನ ಸಹೋದರಿಯರು ಹಿಸ್ಸೆ ಮಾಡಿಕೊಂಡಿರುವ ವಿಷಯ ನನಗೆ ಗೊತ್ತಿಲ್ಲ. ಅವರಿಗೆ ಯಾವ ಹಿಸ್ಸೆ ಹೋಗಿದೆ ಎಂದು ನನಗೆ ಗೊತ್ತಿಲ್ಲ. ಸ.ನಂ.28 ರ ದಕ್ಷಿಣ ಭಾಗದಲ್ಲಿ ಕೆರೆ ಇದೆ ಅಂದರೆ ಸರಿ. ನನ್ನ ಹೆಸರಿಗೆ ಯಾವುದೇ ಜಮೀನು ಇಲ್ಲ. ನನ್ನ ತಂದೆ ಹೆಸರಿಗೆ ಇದೆ. ಆದರೆ ಸರ್ವೆ ನಂಬರ್ ಹೇಳಲು ಬರುವುದಿಲ್ಲ. ನನ್ನ ತಂದೆಗೆ ಸ.ನಂ.29 ರಲ್ಲಿ ಜಮೀನು ಇದೆ ಅಂದರೆ ಹೌದು. ನನ್ನ ತಂದೆ ಸ.ನಂ.29 ಕ್ಕೆ ಯಾವ ಸರ್ವೆ ನಂಬರ್ ನಿಂದ ಹೋಗಿ ಬಂದು ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಗೂಗಲ್ ಮ್ಯಾಪ್ ನ್ನು ತೋರಿಸಲಾಗಿ ಸ.ನಂ.28/2 ರಲ್ಲಿ ಒಂದು ರಸ್ತೆ ಇದೆ ಅಂದರೆ ಸರಿ. ಸದರಿ ರಸ್ತೆಯು ಸ.ನಂ.28/5, 28/6, 28/3 ರಿಂದ ಕಟ್ಟೆಯ ಏರಿಯ

ಮೇಲೆ ಹಾದು ನನ್ನ ಗದ್ದೆಗೆ ಹೋಗುತ್ತದೆ ಅಂದರೆ ಸರಿ. ನಮ್ಮ ಜಮೀನಿನ ಪಕ್ಕದಲ್ಲಿರುವ ಸ.ನಂ.27 ಯಾರದ್ದು ಎಂದು ನನಗೆ ಗೊತ್ತಿಲ್ಲ. ಆದರೆ ಅವರು ಆನವಟ್ಟಿ ಗ್ರಾಮದವರಾಗಿರುತ್ತಾರೆ. ಸ.ನಂ.28/3, 28/5, 28/6 ಯಾರ ಜಮೀನು ಅಂದರೆ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಒಂದು ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನಮೂದಿಸಿರುತ್ತೇನೆ. ಅದು ಯಾರು ಬರೆದುಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯದಲ್ಲಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ನಮೂದಿಸಿದ ಸಂಗತಿಗಳು ನನಗೆ ಗೊತ್ತಿಲ್ಲ. ನಾನು ಹೇಳುವಂತೆ ಸ.ನಂ.27/2 ರಲ್ಲಿರುವ ದಾರಿಯು 1 ನೇ ಪ್ರತಿವಾದಿ ತೋಟ ಮಾಡಿರುತ್ತಾರೆ. ಆ ಕಾರಣ ಸದರಿ ರಸ್ತೆಯನ್ನು ಬಂದು ಮಾಡಿರುತ್ತಾರೆ. 1 ನೇ ಪ್ರತಿವಾದಿ ತೋಟ ಮಾಡಿ ಈಗ ಸುಮಾರು 12 ವರ್ಷ ಆಗಿದೆ. ನಾನು ಹೇಳುವಂತಹ 1 ನೇ ಪ್ರತಿವಾದಿಯು ತೋಟ ಮಾಡಿ ಸದರಿ ರಸ್ತೆಯನ್ನು 12 ವರ್ಷಗಳಿಂದ ಬಂದು ಮಾಡಿರುತ್ತಾರೆ. ನನಗೆ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**

**ಸೊರಬ.**